ಪದಬಂಧ



ಎಡದಿಂದ ಬಲಕ್ಕೆ :

1. ಸಂಧಾನದ ದಶ ವಿಧಾನಗಳ ಅನ್ವೇಷಣ (4)
3. ತಾಸು ತಾಸಿಗೂ ಸಮಾಚಾರ ನಿರಂತರ (3)
4. ಹುಡುಕುವ ಕೆಲಸ ಕೈಗೊಂಡದ್ದರ ಕುರಿತು ವ್ಯಂಗ್ಯ ಮಾತು (3)
6. ಪತ್ನಿಯ ಅನುಕೂಲಕ್ಕಾಗಿ ಮಾಡಿದ ಪರಿಶ್ರಮದ ಪರಿಣಾಮ (4)
7. ನರ್ತಕರನ್ನು ಕರೆಸಿ ನಡೆಸಿದ ಕಾರ್ಯಕ್ರಮ ವ್ಯರ್ಥವಾಯಿತು (4)
9. ಬರಗಾಲ ನೀಗಿಸೀತೇ ಅತ್ಯಂತ ದೊಡ್ಡ ಗ್ರಹದ ಶಕ್ತಿ ? (4)
11. ಹರಿದು ಹಾಕಿದರೇ ? ಅದು ಹೆದ್ದಾರಿ ಪಯಣದ ಒಪ್ಪಿಗೆ ಪತ್ರ (4)
13. ಮೂರ್ಖರ ಮಾತಿನಂತಲ್ಲ, ಅದು ನಿಜವಾಗಿಯೂ ಒಂದು ರತ್ನ (4)
15. ಕಲ್ಪನಾ ವಿಷಯ ಅಷ್ಟೆ, 'ಕೇಳಿದ್ದನ್ನೆಲ್ಲ ಕೊಡುವ ಮರ' (4)
17. ಕಣಿವೆಯಾಚಿನ ಪ್ರದೇಶದ ವ್ಯಾಪಾರಿ ಆತ (3)
18. ಅವನ ಮನದ ಭಾವನೆಗಳಾವುವೂ ಶುಭ್ರವಲ್ಲ (3)
19. ಜೇನು ಸಂಗ್ರಹಿಸಿ ತರುವ ಆಕೆ ಅಡವಿಯಲ್ಲೇ ಹುಟ್ಟಿದವಳು (4)

ಮೇಲಿಂದ ಕೆಳಕ್ಕೆ :

1. ಯಶಸ್ಸನ್ನು ಸಾಧಿಸಲಾದೀತೇ ಎಂಬ ಅನುಮಾನ (3)
2. ವ್ಯಾಕುಲನಾದವನನ್ನು ಕಂಡಾಗಲೆಲ್ಲ ಕಿರಿಯ ಪಾಂಡವನದೇ ನೆನಪು(3)
3. ಕೇಳಿದ ಕೂಡಲೇ ಸಮಾನಾರ್ಥಕಗಳನ್ನು ಒದಗಿಸುವುದರಲ್ಲಿ ಆತ ನಿಪುಣ (3)
5. ನೆಲ ಕೊರೆಯುವವರೊಡನೆ ಕೆಲಸದ ಒಪ್ಪಂದ (3)
7. ದೂರನ್ನು ಸಲ್ಲಿಸಲೇಬೇಕೆಂಬ ತೀರ್ಮಾನ ಆಗಿದೆ (3)
8. ಮರೀಚಿಕೆಯ ಬೆನ್ನುಹತ್ತಿಹೋಗಿ ಬಿದ್ದಿದ್ದು ಆಳ ಹಳ್ಳ (3)
9. ಗಾಳಿಮಾತು ಕೇಳಿಯೇ ಹೆದರಿಹೋದ ಅಡಿಯಾಳು (3)
10. ಲಾಭ ತರಲೆಂದು ತೆಗೆದಿಟ್ಟ ತಾಳವಾದ್ಯ ತಲೆಕೆಳಗು (3)
12. ವಿದ್ಯಾದಾನ ಮಾಡುವವನಂತೆ ಬಂದ ರಕ್ಕಸ (3)
14. ಟಾರಿನ ಡಬ್ಬ ಉರುಳಿಸುವಾಗ ಎಂತಹ ಶಬ್ದ ! (3)
15. ಕಿಂಕರನಾಗಿರಲು ಬಂದವ ಭಾರೀ ದಡ್ಡ (3)
16. ಎಲ್ಲವೂ ಕ್ಷೇಮವಾಗಿರುವಂತೆ ಕಾಪಾಡುವ ಸಾಮರ್ಥ್ಯ ಹೇಗೆ? (3)

### 06-4-2017ರ ಉತ್ತರಗಳು

ಎಡದಿಂದ ಬಲಕ್ಕೆ

1. ಅನುತಾಪ 3. ಕಾನೂನು 4. ಶುನಕ (=ನಾಯಿ) 6. ಕೆಲ ವಿಧ
7. ತಿಲೋದಕ 9. ಸುಮಧುರ 12. ನೆರವೇರು 14. ಕಬಂಧ
15. ಕಾಮನೆ 16. ವರ್ಣಪಟ

ಮೇಲಿಂದ ಕೆಳಕ್ಕೆ

1. ಅನುಬಂಧ 2. ಪಶುಪತಿ 3. ಕಾಪಾಲ 5. ಕಣಾದ 6. ಕೆಕ್ಕರಿಸು
8. ಕರಿನೀರು 10. ಮಸ್ತಕ 11. ರಮಾಧವ 12. ನೆರೆಕಾಟ 13. ವೇದನೆ

## ಪ್ರಶ್ನಾಂಕಣ

# ನೇಕಾರ ಇರುವೆ: ಏನು ವಿಸ್ಮಯ?

ಹೆಸರೇ ಸೂಚಿಸುವಂತೆ ನೇಯುವ ಕೌಶಲ್ಯ ಮೈಗೂಡಿರುವ, ಆ ಕೌಶಲ್ಯ ಬಳಸಿ ವಿಶಿಷ್ಟ ಗೂಡು ನಿರ್ಮಿಸುವ ಇರುವೆಯೇ 'ನೇಕಾರ ಇರುವೆ'. ವಿಸ್ಮಯ ಏನೆಂದರೆ ಇರುವೆಗಳ ಸುಮಾರು ಹತ್ತು ಸಾವಿರ ಪ್ರಭೇದಗಳಲ್ಲಿ ಎರಡೇ ಎರಡು ಪ್ರಭೇದಗಳು ಮಾತ್ರ ಈ ಸಾಮರ್ಥ್ಯ ಪಡೆದಿವೆ ; ತನ್ಮೂಲಕ ಬಹು ವಿಶಿಷ್ಟ ಸ್ಥಾನ ಗಳಿಸಿವೆ. ನೇಕಾರ ಇರುವೆಗಳದು ಭಾರತ, ಶ್ರೀ ಲಂಕಾ ಮತ್ತು ಆಗ್ನೇಯ ಏಷಿಯದ ರಾಷ್ಟ್ರಗಳಲ್ಲಿ ಹಾಗೂ ಮಧ್ಯ ಆಫ್ರಿಕಾದ ಪ್ರದೇಶಗಳಲ್ಲಿ ಮಾತ್ರ ವಾಸ್ತವ್ಯ.

ನೇಕಾರ ಇರುವೆಗಳದು ಕೆಂಬಣ್ಣ ಅಥವಾ ಹಳದಿ ಮಿಶ್ರಿತ ಕಂದು ಬಣ್ಣ; ಒಂದಂಗುಲ ಉದ್ದದ ಶರೀರ; ಸಂಪೂರ್ಣ

ವೃಕ್ಷ ವಾಸ. ಒಂದು ಪ್ರದೇಶದಲ್ಲಿನ ಹತ್ತಿರ ಹತ್ತಿರದ ಹಲವಾರು ವೃಕ್ಷಗಳಲ್ಲಿ ನೂರಾರು ಗೂಡುಗಳನ್ನು ನಿರ್ಮಿಸಿ ಭಾರೀ ವಸಾಹತುವನ್ನೇ ಸಾಪಿಸಿಕೊಳ್ಳುವ ಈ ಇರುವೆಗಳ ಪ್ರತಿ ಕುಟುಂಬದಲ್ಲೂ ಐದಾರು ಲಕ್ಷ ಇರುವೆಗಳಿರುವುದು ಸಾಮಾನ್ಯ! ನೇಕಾರ ಇರುವೆಗಳದು ತುಂಬ ಉಗ್ರ ಸ್ವಭಾವ; ಶತ್ರುವಿನ ಗಾತ್ರವನ್ನು ಲಕ್ಷಿಸದೆ ಗುಂಪಾಗಿ ಧಾಳಿ ಮಾಡುವ ಕ್ರಮ ( ಚಿತ್ರ 1 ). ಶತ್ರುವಿನ ಮೈಯನ್ನು ಕಚ್ಚಿ, ಗಾಯಕ್ಕೆ ಆಮ್ಲ ಎರಚಿ, ಬೆಂಕಿ ತಾಗಿದಂತೆ ಉರಿ ಹಚ್ಚಿಸಿ ಹಿಮ್ಮೆಟ್ಟಿಸುವ ಅಥವಾ ಕೊಂದುಹಾಕುವ ಯುದ್ಧ ವಿಧಾನ.

ನೇಕಾರ ಇರುವೆಗಳ ಪರಮ ವಿಸ್ಮಯ ಅವುಗಳ ಗೂಡು ನಿರ್ಮಾಣ ಕ್ರಮ. ಕೆಲಸಗಾರ ಇರುವೆಗಳು ವೃಕ್ಷಗಳಲ್ಲಿ ಗೂಡು ನಿರ್ಮಿಸಲು




ಸೂಕ್ತವಾದ ದಟ್ಟ ಎಲೆ ಗುಚ್ಛಗಳನ್ನು ಗುರುತಿಸುತ್ತವೆ. ಅಕ್ಕಪಕ್ಕ, ಮೇಲೆ ಕೆಳಗೆ ಬೆಳೆದ ಹಲವಾರು ಎಲೆಗಳನ್ನು ನೂರಾರು ಕೆಲಸಗಾರರು ಸಾಲುಗಟ್ಟಿ ನಿಂತು ತಮ್ಮೆಲ್ಲ ಶಕ್ತಿ ಬಳಸಿ ಎಳೆದು, ಬಾಗಿಸಿ, ಆ ಎಲೆಗಳ ಅಂಚುಗಳನ್ನು ಜೋಡಿಸಿ ಹಿಡಿಯುತ್ತವೆ ( ಚಿತ್ರ 2 ). ಮತ್ತಷ್ಟು ಕೆಲಸಗಾರರು ತಮ್ಮದೇ ಕುಟುಂಬದ ಇತರ ಗೂಡುಗಳಿಂದ ತಮ್ಮದೇ 'ಮರಿ ಹುಳು'ಗಳನ್ನು ಅವಕ್ಕೆ ಕಿಂಚಿತ್ತೂ ಹಾನಿಯಾಗದಂತೆ ಕಚ್ಚಿ ಹಿಡಿದು ತರುತ್ತವೆ ; ಜೋಡಿಸಿ ಹಿಡಿದ ಎಲೆಗಳ ಅಂಚುಗಳ ಉದ್ದಕ್ಕೂ ಆ ಮರಿ ಹುಳುಗಳ ತಲೆಗಳನ್ನು ಮೆಲುವಾಗಿ ತಟ್ಟುತ್ತವೆ. ಹಾಗೆ ಮಾಡಿದಾಗ ಆ ಮರಿ ಹುಳುಗಳು ಸ್ರವಿಸುವ ರೇಶ್ಮೆ ದ್ರವ ದಾರ ದಾರವಾಗಿ ಎಲೆಗಳ ಅಂಚುಗಳನ್ನು ಭದ್ರವಾಗಿ ಅಂಟಿಸಿ ಹಿಡಿಯುತ್ತದೆ ( ಚಿತ್ರ 3 ). ಈ ರೀತಿಯ ಬಳಕೆಯಿಂದ ಮರಿಹುಳುಗಳಿಗೆ ಯಾವುದೇ ಬಗೆಯ ತೊಂದರೆಯೂ ಆಗುವುದಿಲ್ಲ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ಹೀಗೆ ರೂಪುಗೊಳ್ಳುವ ನೇಕಾರ ಇರುವೆ ಗೂಡುಗಳದು ಉದ್ದುದ್ದ ಮೊಟ್ಟೆಯಾಕಾರ; ಒಂದೂವರೆಯಿಂದ ಎರಡು ಅಡಿವರೆಗೂ ಉದ್ದ. ಎಂಥ ಮಳೆಯಲ್ಲೂ ನೀರಿಳಿಯದ, ಗಾಳಿಗೆ ಅಲುಗದ ಈ ಸುಭದ್ರ ಗೂಡುಗಳು ಎಲ್ಲ ಎಲೆಗಳೂ ಬಲಿತು, ಒಣಗಿ, ಉದುರುವವರೆಗೂ ದೃಢವಾಗಿ ಉಳಿದಿರುತ್ತವೆ ! ಎಂಥ ಸೋಜಿಗದ ನಿರ್ಮಿತಿ !

■ ಎನ್. ವಾಸುದೇವ್